837(1193) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರೆವಿನ್ಯೂ ನಿವೇಶನದಾರರು ಮನೆ ನಿವೇಶನ ಮಾರಾಟ ಮಾಡಿದರೆ ಉಪ ನೋಂಧಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಕಷ್ಟದಲ್ಲಿರುವ ನಿವೇಶನದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ನಿವೇಶನದಾರರು ತಮ್ಮ ಆಸ್ತಿ ಪರಭಾರೆ ಮಾಡಲು ಅನುಕೂಲವಾಗುವಂತೆ ನೋಂದಣಿಗೆ ಅವಕಾಶ ಕಲ್ಪಿಸುವ ಬಗ್ಗೆ ಸರ್ಕಾರದ ನಿಲುವೇನು ?

ಈ) ನೋಂದಣಿಗೆ ಯಾವಾಗ ಅವಕಾಶ ಕಲ್ಪಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಕಂದಾಯ ನಿವೇಶನಗಳ ನೋಂದಣಿಯನ್ನು ನಿಷೇಧಿಸಿರುವುದಿಲ್ಲ ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಗಣಕೀಕೃತ ಉತಾರೆಗಳನ್ನು ಹಂಚುವ ನೆಮ್ಮದಿ ಯೋಜನೆ

840(1364) ಶ್ರೀ ಶಿವಾನಂದ ಎಸ್ ಪಾಟೀಲ್(ಬಸವನಬಾಗೇವಾಡಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಗಣಕೀಕೃತ ಉತಾರೆಗಳನ್ನು ಹಂಚುವ ನೆಮ್ಮದಿ ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆಯೆ

ಆ) ರಾಜ್ಯದ ಯಾವ ಯಾವ ಕಡೆಗಳಲ್ಲಿ ನೆಮ್ಮದಿ ಯೋಜನೆಯನ್ನು ಪ್ರಾರಂಭಿಸಲಾಗಿದೆ

ಇ) ಬಸವನಬಾಗೇವಾಡಿ ತಾಲ್ಲೂಕಿನ ಮನಗೊಳಿ ಮತ್ತು ಮುತ್ತಗಿ ಗ್ರಾಮಗಳಲ್ಲಿ ನೆಮ್ಮದಿ ಯೋಜನೆಯನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದೆ ಪ್ರಸ್ತಾವನೆಗಳು ಏನಾದರು ಇವೆಯೇ,

ಈ) ಹಾಗಿದ್ದಲ್ಲಿ, ಮನಗೂಳಿ ಮತ್ತು ಮುತ್ತಗೆ ಗ್ರಾಮಗಳಲ್ಲಿ ನೆಮ್ಮದಿ ಯೋಜನೆಗಳನ್ನು ಸ್ಥಾಪಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗಿದೆ,

ಉ) ಯಾವ ಕಾಲಮಿತಿಯೊಳಗಾಗಿ ನೆಮ್ಮದಿ ಯೋಜನೆಯನ್ನು ಸದರಿ ಗ್ರಾಮಗಳಲ್ಲಿ ಆರಂಭಿಸಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು, ನೆಮ್ಮದಿ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ

ಆ) ನೆಮ್ಮದಿ ಯೋಜನೆಯನ್ನು ರಾಜ್ಯಾದ್ಯಂತ ಪ್ರಾರಂಭಿಸಲಾಗಿದೆ ಈವರೆಗೆ 752 ಗ್ರಾಮೀಣ ಟಿಲಿಕೇಂದ್ರಗಳನ್ನು ಹೋಬಳಿ/ಗ್ರಾಮ ಮಟ್ಟದಲ್ಲಿ ಜಾರಿಗೊಳಿಸಲಾಗಿದೆ ಕರ್ನಾಟಕದಲ್ಲಿ ಒಟ್ಟು 749 ಹೋಬಳಿಗಳಿದ್ದು ಅವುಗಳಲ್ಲಿ 742 ಹೋಬಳಿಗಳಲ್ಲಿ ಹಾಗೂ ಇನ್ನಿತರೆ 10 ಗ್ರಾಮಗಳಲ್ಲಿ ನೆಮ್ಮದಿ ಯೋಜನೆಯನ್ನು ಜಾರಿಗೊಳಿಸಲಾಗಿದೆ

ಇ) ನೆಮ್ಮದಿ ಯೋಜನೆಯು ಬಸವನಬಾಗೇವಾಡಿ ತಾಲ್ಲೂಕಿನ ಮನಗೂಳಿ ಗ್ರಾಮದಲ್ಲಿ ಪ್ರಾರಂಭಿಸಲಾಗಿದೆ ಮುತ್ತಗಿ ಗ್ರಾಮದಲ್ಲಿ ನೆಮ್ಮದಿ ಯೋಜನೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಈಗ ಸರ್ಕಾರದ ಮುಂದೆ ಇರುವುದಿಲ್ಲ

ಈ) ಉತ್ತರ ಸಂಖ್ಯೆ (ಇ)ನ್ನು ಗಮನಿಸಿ

ಉ) ನೆಮ್ಮದಿ ಯೋಜನೆಯು ಮನಗೂಳಿ ಗ್ರಾಮದಲ್ಲಿ 19 05 2007 ರಂದು ಪ್ರಾರಂಭಗೊಂಡಿದೆ

ಹೊಸದಾಗಿ ಭೂಮಿ ಕೇಂದ್ರಗಳನ್ನು ತೆರೆಯುವುದು

841(1365) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಇರತಕ್ಕಂತಹ ಭೂಮಿ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಹೊಸದಾಗಿ ಭೂಮಿ ಕೇಂದ್ರಗಳನ್ನು ತೆರೆಯುವ ಉದ್ದೇಶ ಸರ್ಕಾರದ ಮುಂದಿದೆಯೇ,

ಇ) ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಭೂಮಿ ಕೇಂದ್ರಗಳನ್ನು ತೆರೆಯಲಾಗುವುದು,

ಈ) ಬಸವನಬಾಗೇವಾಡಿ ತಾಲ್ಲೂಕಿನ ಕೋಲಾರ ಗ್ರಾಮವು ಹೋಬಳಿ ಪ್ರದೇಶವಾಗಿದ್ದು, ಇಲ್ಲಿ ಹೊಸದಾಗಿ ಭೂಮಿ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಇ) ಹಾಗಿದ್ದಲ್ಲಿ ಕೋಲಾರ ಗ್ರಾಮದಲ್ಲಿ ಅತೀ ಅವಶ್ಯಕವಾಗಿರತಕ್ಕಂತಹ ಭೂಮಿ ಕೇಂದ್ರವನ್ನು ಯಾವ ಕಾಲ ಮಿತಿಯೊಳಗೆ ತೆರೆಯಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಇಲ್ಲ

ಈ) ಅನ್ವಯಿಸುವುದಿಲ್ಲ